




ಪುಟ್ಟಿ: ಅಪ್ಪಾ, ಎಲ್ಲರೂ ಕೊರೋನಾ ಅಂತ ತುಂಬಾ ಹೆದರುತ್ತಾ ಇದಾರಲ್ಲ, ಎಲ್ಲಿಂದ ಬಂತಪ್ಪ ಅದು?

ಅಪ್ಪ: ಚೀನಾದಿಂದ ಬಂತು ಪುಟ್ಟಿ.

ಪುಟ್ಟಿ: ಅದಕ್ಯಾಕೆ ಹೆದರೋದು, ವಾಪಸ್ ಚೀನಾಕ್ಕೆ ಬಿಟ್ಟು ಬಂದರಾಯ್ತು!

ಅಪ್ಪ: ಹಾಂ!

***

ರಮೇಶ: ಲೋ ಸುರೇಶ, 1 ತಿಂಗಳು ಊರಿಗೆ ಹೊರಟಿದ್ದೆ. ಆದ್ರೆ ನಮ್ ಏರಿಯಾದಲ್ಲಿ ಕಳ್ಳರ ಕಾಟ.

ಸುರೇಶ: ನಾಯಿ ಇದೆ ಎಚ್ಚರಿಕೆ ಅಂತ ಬೋರ್ಡ್ ಇದೆ ಅಲ್ವಾ?

ರಮೇಶ: ಹಾಗಿದ್ರೂ ಪಕ್ಕದ್ ಮನೇಲಿ ಕಳ್ಳತನ ಆಗಿದೆ.

ಸುರೇಶ: ಓಹ್ ಹೌದಾ? ಕೊರೊನ ಇದೆ ಎಚ್ಚರಿಕೆ ಅಂತ ಹೊಸ ಬೋರ್ಡ್ ಹಾಕಿಸಿಬಿಡು. ಕಳ್ಳರು ಉಡೀಸ್!

***

ಗಣೇಶ: ಮಗಾ, ಕೊರೊನದಿಂದಾಗಿ ಟ್ರಾಫಿಕ್ ಪೊಲೀಸರ ಕಾಟ ಕಡಿಮೆ ಆಗಿದೆ ಅನ್ಸುತ್ತೆ.

ಸುರೇಶ: ಅದ್ಹೇಗೋ ಹೇಳ್ತೀಯ?

ಗಣೇಶ: ಮಾಸ್ಕ್ ಹಾಕ್ಕೊಂಡ್ ಕೆಮ್ಮಿದ್ರೆ ಸಾಕು, ಹೆಲ್ಮೆಟ್, ಡಿ.ಎಲ್, ಆರ್ಸಿ ಏನೂ ಕೇಳದೆ ದೂರ ಓಡಿ ಹೋಗ್ತಾರೆ.

***

ರಾಮು: 2020 ವರ್ಷ ಈ ಡೆಡ್ಲಿ ಕೊರೊನಾದಿಂದಾಗಿ 2020 ಮ್ಯಾಚ್ ಥರ ಆಗ್ಬಿಟ್ಟಿದೆ ಕಣೋ...

ಶಾಮು: ಅದ್ಹೇಗೋ?

ರಾಮು: ಮತ್ತೆ, ಗೆಲ್ತೀವೋ,ಸೋಲ್ತೀವೋ,ಸಿಕ್ಸ್ ಹೊಡಿತೀವೋ ಇಲ್ಲ ವಿಕೆಟ್ ಒಪ್ಪಿಸ್ತೀವೋ ಒಂದೂ ಹೇಳೋಕ್ಕಾಗೊಲ್ಲ.

***

ಗುಂಡ: ನಿಜ ಹೇಳಬೇಕೆಂದರೆ ಕೊರೊನಾಗೆ ಥ್ಯಾಂಕ್ಸ್ ಹೇಳಬೇಕು.

ತಿಮ್ಮ: ಎಲ್ರೂ ಹೆದರಿ ಸಾಯ್ತಾ ಇದ್ರೆ ನೀ ಏನ್ ಹಂಗ ಹೇಳ್ತಾ ಇದೀಯ?

ಗುಂಡ: ಹೂಂ ಮತ್ತೆ.. ಓದಿಲ್ಲ, ಬರೆಯೋದಿಲ್ಲ. ಶಾಲೆ ರಜೆ, ಪರೀಕ್ಷೆ ಬಂದ್. ಉಂಡು ತಿಂದು ಆರಾಮಾಗಿ ಟೀವಿ ನೋಡ್ತಾ ಕೂತ್ರೂ ಅಪ್ಪ ಅಮ್ಮ ಬೈಯೋದಿಲ್ಲ.

ತಿಮ್ಮ: ಹ್ಹ ಹ್ಹ ಹ್ಹ.

***

ರಮೇಶ್: ಲೋ ಸುರೇಶ್ ನೀನು ಯಾವ ಟೂಥ್ ಪೇಸ್ಟ್ ಬಳಸುತ್ತಿದ್ದೀಯ?

ಸುರೇಶ್: ಕ್ಲೋಸಪ್ ಕಣೋ..

ರಮೇಶ್: ಮೊದಲು ಬದಲಾಯಿಸು.

ಸುರೇಶ್: ಯಾಕೋ... ಏನಾಯ್ತು?

ರಮೇಶ್: ಕ್ಲೋಸಪ್ ನಿಂದ ಹುಡುಗೀರು ಕ್ಲೋಸ್ ಆಗ್ತಾರಂತ ಜಾಹೀರಾತಿನಲ್ಲಿ ನೋಡಿದ್ದೆ. ಕ್ಲೋಸ್ ಕಾಂಟ್ಯಾಕ್ಟ್ ನಿಂದ ಕೊರೋನಾ ಬರುತ್ತಂತೆ. ಅದಕ್ಕೇ....

(ಸಂಗ್ರಹ) ನರಹರಿ ಬಿ, ಕಾರವಾರ

ಗುಂಡ: ಲೇ ಏನಾಯಿತೇ?

ಹೆಂಡತಿ: ಅಯ್ಯೋ ಸಿಕ್ಕಾಪಟ್ಟೆ ಕತ್ತು ನೋವು ಕಣ್ರೀ

ಗುಂಡ: ಹೌದಾ? ಅಂಗಡಿಗೆ ಹೋಗ್ತಾ ಇದೀನಿ. ಏನಾದರೂ ತರಲಾ?

ಹೆಂಡತಿ: ಒಂದು ಚಿನ್ನದ ನೆಕ್ಲೇಸ್ ತನ್ನಿ.

***

ಗುಂಡ: ಸಂತೋಷದಲ್ಲಿ ಇರುವ ಸುಖ ನನಗೆ ಇದುವರೆವಿಗೂ ಗೊತ್ತಾಗಲೇ ಇಲ್ಲ.

ಗೆಳೆಯ: ಮತ್ತೆ ಯಾವಾಗ ಗೊತ್ತಾಯಿತು?

ಗುಂಡ: ಮೊನ್ನೆ ನನ್ನ ಹೆಂಡತಿ ಡೈವೋರ್ಸ್ ಕೊಟ್ಟಾಗ.

***

ಟೀಚರ್: ಶಾಂತಿ,ನೆಮ್ಮದಿ ಮತ್ತು ಸಂತೋಷ ಈ ಮೂರೂ ಒಟ್ಟಿಗೆ ಅನುಭವಿಸುವ ಸಂದರ್ಭದ ಬಗ್ಗೆ ಒಂದು ಪ್ರಬಂಧ ಬರೆಯಿರಿ.

ಗುಂಡ ಹೀಗೆ ಬರೆದಿದ್ದ 'ನನ್ನ ಹೆಂಡತಿ ಮಲಗಿದ್ದಾಳೆ'

***

ರಾಯರು: ಲೋ ಗುಂಡ ಏನೂ ತಿಳಿದುಕೊಳ್ಳಬೇಡ. ನಿನ್ನ ಮದುವೆಗೆ ಬರಲು ಸಾಧ್ಯವಾಗಲಿಲ್ಲ.

ಗುಂಡ: ಪರವಾಗಿಲ್ಲ ಬಿಡಿ ಸಾರ್! ಈಗ ತಾನೇ ಇದೇ ಮಾತನ್ನು ಹೇಳಿ ರಾಜಾರಾಯರು ಉಡುಗೊರೆಯಾಗಿ ಒಂದು ಸಾವಿರ ರೂಪಾಯಿ ಕೊಟ್ಟುಹೋದರು.

***

ಹೆಂಡತಿ: ರೀ ಹುಷಾರು! ಮನೆಯಲ್ಲಿ ಒಬ್ಬರೇ ಇರುತ್ತೀರಾ. ಭೂತಗೀತ ಬಂದ್ರೆ ಏನು ಮಾಡ್ತೀರಾ?

ಗುಂಡ: ನೀನೇನೂ ಚಿಂತಿಸ ಬೇಡ ಕಣೇ! ಭೂತ ಬಂದ್ರೆ ಓಡಿಸುತ್ತೇನೆ. ಗೀತ ಬಂದ್ರೆ ನಾಳೆ ಬೆಳಿಗ್ಗೆ ಕಳಿಸುತ್ತೀನಿ.

***

ಪೊಲೀಸ್: ನಿಮ್ಮ ಗಂಡ ಹೇಗೆ ಸತ್ತರು?

ಗುಂಡಮ್ಮ: ವಿಷ ಕುಡಿದು ಸಾರ್

ಪೊಲೀಸ್: ಮತ್ತೆ ಅವರ ದೇಹದ ಮೇಲೆ ಈ ಗಾಯಗಳು ಹೇಗಾದವು?

ಗುಂಡಮ್ಮ: ಅವರು ವಿಷ ಕುಡಿಯುವುದಕ್ಕೆ ನಿರಾಕರಿಸಿದ್ದರಿಂದ.

(ಸಂಗ್ರಹ) ಎಂ.ಕೆ. ಮಂಜುನಾಥ್


